ಮಾಡಿಕೊಳ್ಳಲು ಒಪ್ಪಿದ್ದಾನೆ. ಆದರೆ ಅವನದು ಒಂದೇ ಕಂಡೀಷನ್. ಅಪ್ಪ ಹೆಣ್ಣನ್ನು ಸಿಲೆಕ್ಟ್ ಮಾಡುವುದು ಹಾಗೂ ಮಗ ಅವಳನ್ನು ಎರಡನೇ ಮಾತಿಲ್ಲದೇ ಮದುವೆ ಮಾಡಿಕೊಳ್ಳುವುದು. ಹೀಗಾಗಿ ರಾಯರು ಒಂದು ವಾರದಿಂದ ಕನ್ಯೆಯನ್ನು ಹುಡುಕಲು ಇನ್ನಿಲ್ಲದ ಪ್ರಯತ್ನ ಪಡುತ್ತಿದ್ದಾರೆ. ವರ ಕನ್ಯಾ ಕೇಂದ್ರಗಳಿಗೆ ಒಂದೇ ಸಮನೇ ಎಡತಾಕುತ್ತಿದ್ದಾರೆ. ಯಾವ ಸಂಬಂಧಗಳೂ ಸರಿ ಹೊಂದುತ್ತಿಲ್ಲ. ನವೀನ ರಜೆಯ ಮೇಲೆ ಭಾರತಕ್ಕೆ ಬರಲು ಇನ್ನು 15 ದಿನಗಳು ಬಾಕಿ ಉಳಿದಿವೆ. ಅಷ್ಟರಲ್ಲಿ ಒಂದು ಐದಾರು ಕನ್ಯೆಯರನ್ನಾದರೂ ಶಾರ್ಟ್ ಲಿಸ್ಟ್ ಮಾಡಿ ಇಡಬೇಕು ಎಂದು ಹೆಣಗುತ್ತಿದ್ದಾರೆ. ಮಗ ಬೇಡವೆಂದರೂ ಅವನಿಗೆ ಐದಾರು ಹುಡುಗಿಯರನ್ನು ತೋರಿಸದಿದ್ದರೆ ಅವನು ಹುಡುಗಿಯನ್ನು ಸಿಲೆಕ್ಟ್ ಮಾಡುವುದಾದರೂ ಹೇಗೆ ಎಂದು ಚಿಂತಿಸುತ್ತಿದ್ದಾರೆ.

ರಾಯರು ಬಾತ್‌ರೂಮಿಗೆ ಹೋಗಿ ಬಂದು ಮತ್ತೆ ಮಲಗಿದರು. ನಿದ್ರೆ ಅವರ ಸನಿಹ ಕೂಡ ಸುಳಿಯುತ್ತಿಲ್ಲ.

ಒಂದು ವಾರ ಕಳೆದರೂ ಯಾವುದೇ ಪ್ರಗತಿಯಿಲ್ಲ. ರಾಯರು ನಿನ್ನೆಯ ದಿನದಿಂದ ತೀರಾ ಉದ್ವಿಗ್ನರಾಗಿದ್ದಾರೆ. ಕಾರಣ ನಿನ್ನೆಯ ದಿನ ಪರಿಚಯಸ್ತರೊಬ್ಬರು ಹೇಳಿದ ಕನ್ಯೆಯ ವಿಳಾಸ ಹಿಡಿದು ಹೊರಟಾಗ ಆದ ಅನುಭವ. ಕನ್ಯೆಯ ತಾಯಿ ಮತ್ತಾರೂ  ಅಲ್ಲ, ತಾವು ಆ ದಿನ ಮಳೆಯಲ್ಲಿ ಮನೆ ತಲುಪಿಸಿದ ಮಹಿಳೆ, ನೋಡಿದರೆ ಗೌರವ ಭಾವನೆ ಬರುವಂತಹ ಸ್ತ್ರೀ. ರಾಯರನ್ನು ನಗುಮೊಗದಿಂದ ಆತ್ಮೀಯವಾಗಿ ಸ್ವಾಗತಿಸಿದಳು. ತಮ್ಮ ಮನೆತನದ ಸ್ಥಿತಿ, ಅಂತಸ್ತು, ಮಗಳ ವಿದ್ಯಾಭ್ಯಾಸ, ಅವಳು ಮಾಡುವ ನೌಕರಿ ಬಗ್ಗೆ ತಿಳಿಸಿದಳು. ಮಗಳ ಫೋಟೊ ಕೂಡ ತೋರಿಸಿದಳು. ಹಾಗೆಯೇ ರಾಯರ ಮನೆತನ, ಅಂತಸ್ತು, ಕೌಟುಂಬಿಕ ವಾತಾವರಣದ ಬಗ್ಗೆ ತನ್ನ ಮೃದು ಮಾತಿನ ಚತುರತೆಯಿಂದಲೇ ಸಂಗ್ರಹಿಸಿದಳು. ಹುಡುಗಿ ಎಲ್ಲಾ ತರಹದಿಂದಲೂ ನವೀನನಿಗೆ ಆಗಬಹುದು ಎನಿಸಿತು. ರಾಯರಿಗೆ ಹುಡುಕುತ್ತಿರುವ ಬಳ್ಳಿ ಕಾಲಿಗೆ ತೊಡರಿದಷ್ಟು ಸಂತೋಷವಾಯಿತು.

ಅವಳ ಮಾತಿನ ಪ್ರಕಾರ ಹುಡುಗಿ ಅವಳ ಒಬ್ಬಳೇ ಮಗಳು. ಮಹಿಳೆಯ ಹೆಸರು ಸರೋಜಾ. ಸರೋಜಾ ಮೊದಲು ಎಲ್.ಐ.ಸಿ. ಯಲ್ಲಿ ಕೆಲಸ ಮಾಡುತ್ತಿದ್ದು, ಅವಳ ಗಂಡ ತೀರಿ ಹೋದ ಮೇಲೆ ಮಗಳ ವಿದ್ಯಾಭ್ಯಾಸದ ಸಲುವಾಗಿ ನಾಲ್ಕು ವರುಷಗಳ ಹಿಂದೆ ಸ್ವಯಂ ನಿವೃತ್ತಿ ಪಡೆದಿದ್ದಾಳೆ. ರಾಯರು ತಮ್ಮ ಹೆಂಡತಿ ತೀರಿ ಹೋದ ಮೇಲೆ ಪಟ್ಟ ಬವಣೆಯೆಲ್ಲ ವಿವರಿಸಿದರು. ಆವಳೂ ತನ್ನ ಗಂಡ ಹೋದಾಗಿನಿಂದ ಮಗಳನ್ನು ಕಲಿಸುವ, ಬೆಳೆಸುವ ಕಷ್ಟವನ್ನೆಲ್ಲ ಹೇಳಿಕೊಂಡಳು. ಇರುವ ಒಬ್ಬ ಮಗಳನ್ನು ಮದುವೆ ಮಾಡಿಕೊಟ್ಟುಬಿಟ್ಟರೆ ತಾನೊಬ್ಬಳೆ ಒಂಟಿಯಾಗಿ ಹೇಗೆ ಜೀವನ ಸಾಗಿಸುವುದೆಂದು ಪೇಚಾಡಿದಳು. ಮನೆಗೆ ಯಜಮಾನರು ಎಂಬ ವಸ್ತು ಇರದಿದ್ದರೆ ಜೀವನ ಎಷ್ಟು ದುರ್ಬರವಾಗುತ್ತದೆ ಎಂಬುದನ್ನು ಹೇಳಿ ಕಣ್ಣೀರು ಒರೆಸಿಕೊಡಳು. ಸರೋಜಳ ಆತ್ಮೀಯತೆ, ಅತಿಥಿ ಸತ್ಕಾರ ರಾಯರ ಮನಸ್ಸನ್ನು ಮುದಗೊಳಿಸಿತು.

ಮರುದಿನ ಮತ್ತೆ ಅವರ ಮನೆಗೆ ಹೋಗಿ ಮಗಳನ್ನು ಭೇಟಿ ಮಾಡಿ ಮಗಳೂ ಕೂಡಾ ತಾಯಿಯಂತೆ ಸುಶೀಲ ಎಂಬುದನ್ನು ಧೃಡಪಡಿಸಿಕೊಂಡರು. ತಮಗೆ ಇದಕ್ಕಿಂತ ಒಳ್ಳೆಯ ಸಂಬಂಧ ಸಿಗಲಾರದೆಂದು ಯೋಚಿಸಿದರು. ಇದರಲ್ಲಿ ಒಂದು ಕೆಲಸ ಮಾತ್ರ ಬಾಕಿ ಉಳಿದಿದ್ದಿತು. ಇಬ್ಬರೂ ಸಂಪ್ರದಾಯಸ್ತ ಬ್ರಾಹ್ಮಣ ಕುಟುಂಬದವರಾದುರಿಂದ ಹುಡುಗ ಹಾಗೂ ಹುಡುಗಿಯ ಜಾತಕಗಳನ್ನು ಶಾಸ್ತ್ರಿಗಳಿಗೆ ತೋರಿಸಿ ಮುಂದುವರಿಯುವುದು. ಈಗಾಗಲೇ ರಾಯರು ಅತೀ ಉತ್ಸಾಹದಿಂದ ಎಲ್ಲ ಬೆಳವಣಿಗೆಗಳನ್ನು ಫೋನ್ ಮುಖಾಂತರ ನವೀನನಿಗೆ ತಿಳಿಸಿದ್ದರು. ರಾಯರಿಗೆ ಜಾತಕದಲ್ಲಿ ಅಷ್ಟೇನೂ ನಂಬಿಕೆ ಇಲ್ಲದಿದ್ದರೂ ಅದೊಂದನ್ನು ಯಾಕೆ ಬಿಡುವುದೆಂದು, ಸರೋಜಳಿಗೆ ತಾವು ಮರುದಿನ ಅವರ ಮನೆಗೆ ಬರುವುದಾಗಿಯೂ ಇಬ್ಬರೂ ಸೇರಿ ಶಾಸ್ತ್ರಿಗಳ ಹತ್ತಿರ ಹೋಗುವುದೆಂದು ನಿರ್ಧರಿಸಿಯಾಗಿತ್ತು. ಶಾಸ್ತ್ರಿಗಳ ಹತ್ತಿರ ಹೋದಾಗಲೇ ಅವರಿಗೆ ಆಘಾತ ಕಾದಿತ್ತು. ಇಬ್ಬರ ಗೋತ್ರಗಳು ಒಂದೇ ಆಗಿರುವುದರಿಂದ, ಹುಡುಗಿ ಹುಡುಗನಿಗೆ ಶಾಸ್ತ್ರದ ಪ್ರಕಾರ ತಂಗಿಯಾಗುತ್ತಾಳೆಂದೂ ಮತ್ತೂ ಈ ಮದುವೆ ಸಾಧ್ಯವಿಲ್ಲವೆಂದೂ  ಖಡಾಖಂಡಿತವಾಗಿ ತಿಳಿಸಿದರು. ಮನಸ್ಸಿನಲ್ಲಿಯೇ ಮಂಡಿಗೆ ತಿನ್ನುತ್ತಿದ್ದ ಇಬ್ಬರಿಗೂ ಈ ಆಘಾತಕಾರಿ ಸುದ್ದಿಯನ್ನು ಅರಗಿಸಿಕೊಳ್ಳಲು ತುಸು ಸಮಯವೇ ಬೇಕಾಯಿತು. ಬೇರೆ ಯಾವುದಾದರೂ ದೋಷವಿದ್ದರೂ ಹೇಗಾದರೂ ಸರಿಪಡಿಸಬಹುದಿತ್ತು. ಆದರೆ ಸಗೋತ್ರವಾಗುವುದರಿಂದ ಹುಡುಗಿ ಹುಡುಗನಿಗೆ ಶಾಸ್ತ್ರದ ಪ್ರಕಾರ ತಂಗಿಯಾಗುತ್ತಾಳೆ ಎಂದು ಶಾಸ್ತ್ರಿಗಳು ಹೇಳಿದ ಮೇಲೂ ಅವರಿಗೆ ಮುಂದುವರಿಯಲು ಮುಜುಗರವಾಯ್ತು. ಬಿಳಿಚಿಕೊಂಡ ಮುಖ ಹೊತ್ತ ಇಬ್ಬರೂ ವಿದಾಯ ಹೇಳಿ ಬೀಳ್ಕೊಟ್ಟರು. ಆ ರಾತ್ರಿಯೆಲ್ಲ ರಾಯರಿಗೆ ನಿದ್ರೆ ಬರಲಿಲ್ಲ. ಸಂಬಂಧ  ಬೆಳೆಸುವಾಗಗೋತ್ರ ಬಿಡಬೇಕೆಂಬ ಪ್ರಾಥಮಿಕ ಪಾಠವನ್ನೂ ತಾವು ಮರೆತೆವಲ್ಲಾ ಎಂಬ ಅಂಶ ಅವರನ್ನು ಚುಚ್ಚತೊಡಗಿತು. ಒಳ್ಳೆಯ ಸಂಬಂಧವೊಂದು ಕೈತಪ್ಪಿ ಹೋದುದು ಅವರಿಗೆ ತೀವ್ರ ನೋವಿನ ಸಂಗತಿಯಾಗಿತ್ತು. ಇದನ್ನು ಹೇಗೆ ಸರಿಪಡಿಸಬಹುದೆಂದು ತಿಳಿಯದೇ ಹಾಸಿಗೆಯಲ್ಲಿ ಬರೀ ಹೊರಳಾಡಿದರು.

ಮರುದಿನ ನವೀನನಿಗೆ ಎಲ್ಲವನ್ನೂ ವಿಷದವಾಗಿ ಫೋನಿನಲ್ಲಿ ಹೇಳಿದರು. ಮುಖ್ಯವಾಗಿ ಹುಡುಗಿ ಹುಡುಗನಿಗೆ ಶಾಸ್ತ್ರದ ಪ್ರಕಾರ ಹಾಗೂ ವಾಸ್ತವದಲ್ಲಿ ತಂಗಿಯಾಗುತ್ತಾಳೆ ಎಂದು ಶಾಸ್ತ್ರಿಗಳು ಹೇಳಿದ ಮಾತನ್ನೂ ಹೇಳಿದರು. ನವೀನ ಏನನ್ನೂ ಹೇಳಲಿಲ್ಲ. ಎರಡು ದಿನಗಳ ನಂತರ ಫೋನ್ ಮಾಡುವುದಾಗಿ ತಿಳಿಸಿ ಫೋನ್ ಕಟ್ ಮಾಡಿದ.

ಎರಡು ದಿನಗಳಾದರೂ ನವೀನನಿಂದ ಫೋನ್ ಬರಲಿಲ್ಲ. ಮೂರನೆಯ ದಿನ ತಮಗೊಂದು ಮೇಲ್ ಕಳಿಸಿರುವುದಾಗಿ, ಅದನ್ನು ಓದಿ ತಮ್ಮ ಅಭಿಪ್ರಾಯ ತಿಳಿಸಬೇಕಾಗಿ ಹೇಳಿ ಫೋನ್ ಕಟ್ ಮಾಡಿದ. ಅವರು ಆತುರಾತುರರಾಗಿ ಮೇಲ ಓಪನ್ ಮಾಡಿ ನೋಡಿದಾಗ ಕೆಳಗಿನ ಬರಹವಿತ್ತು.

ಪೂಜ್ಯ ತಂದೆಯವರಿಗೆ,

ತಾವು ತಿಳಿಸಿದ ಸಂಗತಿಗಳನ್ನೆಲ್ಲ ಕೂಲಂಕಶವಾಗಿ ಮಥನ ಮಾಡಿದ್ದೇನೆ. ತಾವು ಪಟ್ಟ, ಪಡುತ್ತಿರುವ ಬವಣೆಗಳೆಲ್ಲ ನನಗೆ ಗೊತ್ತು. ನಾನು ಇನ್ನೂ ಐದಾರು ವರುಷ ಭಾರತಕ್ಕೆ ಬರುವ ಸಾಧ್ಯತೆಗಳಿಲ್ಲ. ಇದಕ್ಕೆ ಕಾರಣ ನಾನು ಬ್ಯಾಂಕಿನಿಂದ ಅಮೆರಿಕಕ್ಕೆ ಬರಲು ತೆಗೆದುಕೊಂಡ ಸಾಲ ಹಾಗೂ ನನಗೆ ಅಲ್ಲಿ ಸೂಕ್ತ ಸ್ಥಾನಮಾನ ಸಿಗದಿರುವ ಆತಂಕವೆನ್ನುವುದು ನಿಮಗೂ ಗೊತ್ತು. ನಿಮ್ಮನ್ನು ಅಲ್ಲಿ ಒಂಟಿಯಾಗಿ ಬಿಡಲೂ ನನ್ನ ಮನಸ್ಸು ಒಪ್ಪುತ್ತಿಲ್ಲ. ನೀವು ಈ ವಯಸ್ಸಿನಲ್ಲಿ ಬ್ಯಾಂಕಿನ ಜವಾಬ್ದಾರಿಯನ್ನೂ ನಿಭಾಯಿಸಿ ಮನೆಯಲ್ಲಿ ಕೈ ಬಾಯಿ ಸುಟ್ಟುಕೊಳ್ಳುವುದು ನನಗೆ ಸುತರಾಂ ಇಷ್ಟವಿಲ್ಲ. ತಾವು ನನ್ನ ಹಾಗೂ ಅಕ್ಕನ ಸಲುವಾಗಿ ಮಾಡಿದ ತ್ಯಾಗದ ಅರಿವು ನನಗಿದೆ. ನಿಮ್ಮ ಸ್ಥಿತಿಯ ಬಗ್ಗೆ ಯೋಚಿಸಿ, ಯೋಚಿಸಿ ನನಗೂ ಆತಂಕವಾಗುತ್ತಿದೆ. ಹೀಗಾಗಿ ನಾನೂ, ನನ್ನ ತಂಗಿ (ನೀವು ಹೊಸದಾಗಿ ನಮೂದಿಸಿರುವ ತಂಗಿ), ಹಾಗೂ ಅಕ್ಕ ಸೇರಿ ನೀವು ಒಂಟಿಯಾಗಿ ಇರಲು ಬಿಡಬಾರದೆಂಬ ನಿರ್ಧಾರಕ್ಕೆ ಬಂದಿದ್ದೇವೆ. ತಾವು ಚತುರ್ಭುಜರಾಗಿ(ವಿವಾಹವಾಗಿ) ನಮ್ಮನ್ನು ಸಂತೋಷಪಡಿಸುವಿರಾಗಿ ನಂಬಿದ್ದೇವೆ. ನೀವು ನಮ್ಮ ಸಂತೋಷದಲ್ಲಿ ಯಾವಾಗಲೂ ಅಡ್ಡಿ ಬಂದಿಲ್ಲವೆಂದು ನಮಗೆ ಗೊತ್ತು. ಸರೋಜಮ್ಮ (ನನ್ನ ಹೊಸ ತಂಗಿಯ ತಾಯಿ) ನನ್ನ ಹೊಸ ತಾಯಿಯಾಗಲು ಸರ್ವ ವಿಧದಲ್ಲೂ ಅರ್ಹಳೆಂದು ನಾನು ಅವರ ಜೊತೆ ಮಾತನಾಡಿ ಕಂಡುಕೊಡಿದ್ದೇನೆ ಹಾಗೂ ಒಪ್ಪಿಸಿದ್ದೇನೆ. ಅವರೂ ಕೂಡಾ ತಾವಿದ್ದ ಸ್ಥಿತಿಯಲ್ಲೇ ಇದ್ದಾರೆ. ಈ ಸಂಬಂಧದಲ್ಲಿ ಗೋತ್ರದ ಗೋಜಲೇನು ಇಲ್ಲವೆಂದು ನಾನು ಶಾಸ್ತ್ರ ಬಲ್ಲವರಿಂದ ಖಚಿತಪಡಿಸಿಕೊಂಡಿದ್ದಾಗಿದೆ. ತಾವು ದಯವಿಟ್ಟು ಸರೋಜಮ್ಮ ಅವರನ್ನು ಕೂಡಲೇ ಕಂಡು ಮದುವೆಯ ಪ್ರಸ್ತಾಪ ಮಾಡುವುದು. ಮುಂದಿನ ಬೆಳವಣಿಗೆಯನ್ನು ನನಗೆ ಕೂಡಲೇ ತಿಳಿಸುವುದು. ಅಧಿಕ ಪ್ರಸಂಗತನ ತೋರಿದ್ದಕ್ಕೆ ಕ್ಷಮೆಯಿರಲಿ.

ಇಂತಿ ತಮ್ಮ  ಸುಖವನ್ನೇ ಸದಾ ಬಯಸುವ ಪುತ್ರ ನವೀನ.

ರಾಯರಿಗೆ ಇದೇನಿದು, ನಮಾಜು ಮಾಡಲು ಹೋದರೆ, ಮಸೀದಿ ಮೈ ಮೇಲೆ ಬಿದ್ದಂತಾಯ್ತಲ್ಲ ಎಂಬ ಪುಳಕಪೂರ್ಣ ಆತಂಕ ಒಂದು ಕಡೆಗಾದರೆ ಮಗನ ಪ್ರಬುದ್ಧತೆ ಕಂಡು ಹೆಮ್ಮೆಯೆನಿಸಿತು.

ರಾಯರು ಅಳೆದು ಸುರಿದೂ ಒಂದು ನಿರ್ಧಾರಕ್ಕೆ ಬಂದಾಗ ರಾತ್ರಿಯ ಒಂದು ಗಂಟೆಯಾಗಿತ್ತು. ಮರುದಿನ ಬೇಗ ಎದ್ದು ಎಂದಿಗಿಂತ ಸ್ವಲ್ಪ ಮುತುವರ್ಜಿ ವಹಿಸಿ ಶೇವ್ ಮಾಡಿಕೊಂಡು, ಸ್ನಾನ ಮಾಡಿ, ತಲೆಗೆ ಕ್ರೀಮ್ ಹಚ್ಚಿಕೊಂಡು, ಗರಿಗರಿಯಾದ ಇಸ್ತ್ರಿ ಬಟ್ಟೆ ತೊಟ್ಟುಕೊಂಡು ಸಣ್ಣಗೆ ಸಿಳ್ಳೆ ಹೊಡೆಯುತ್ತ ಸಿನಿಮಾ ಹಾಡೊಂದನ್ನು ಗುನುಗುನಿಸುತ್ತ ಸರೋಜಳ ಮನೆಯ ಕಡೆಗೆ ಉತ್ಸಾಹದ ಹೆಜ್ಜೆ ಹಾಕಿದರು.